# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 310 |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 09.12.2025 |
| ಉತ್ತರಿಸುವವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗಣಿಗಾರಿಕೆ ಚಟುವಟಿಕೆಗಳಿಂದ ಪುರಾತತ್ವ ಪರಂಪರೆಯ ತಾಣಗಳು, ಅರಣ್ಯಗಳು ಮತ್ತು ಸ್ಥಳೀಯ ಪರಿಸರಕ್ಕೆ (ಗಣಿಗಾರಿಕಾ ವಲಯಗಳಲ್ಲಿ ಇರುವ ದೇವಾಲಯಗಳು ಮತ್ತು ಸಂರಕ್ಷಿತ ಸ್ಮಾರಕಗಳ ಬಳಿ ಕಂಡುಬಂದಂತೆ) ಹಾನಿಯಾಗದಂತೆ ಖಚಿತಪಡಿಸಿಕೊಳ್ಳಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ: | ಗಣಿಗುತ್ತಿಗೆ ಮಂಜೂರು ಮಾಡುವ ಪೂರ್ವದಲ್ಲಿ ಕಂದಾಯ, ಅರಣ್ಯ ಇಲಾಖೆ ಹಾಗೂ ಸಂಬಂಧಿಸಿದ ಎಲ್ಲಾ ಇಲಾಖೆಗಳಿಂದ ಶಾಸನಬದ್ಧ ದಾಖಲೆಗಳನ್ನು ಒಳಗೊಂಡಂತೆ ದಾಖಲೆಗಳನ್ನು ಪಡೆದು ಗಣಿಗುತ್ತಿಗೆ ಕರಾರು ಒಪ್ಪಂದ ಜಾರಿ ಮಾಡಲಾಗುತ್ತದೆ.<br><br>ಉದ್ದೇಶಿತ ಗಣಿಗುತ್ತಿಗೆ ಮಂಜೂರಾತಿ ಪ್ರದೇಶವು ಪುರಾತತ್ವ ಪರಂಪರೆಯ ತಾಣದ ವ್ಯಾಪ್ತಿಗೆ ಒಳಪಡುತ್ತಿದ್ದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ / ಪುರಾತತ್ವ ಇಲಾಖೆಯ ನಿಯಮಗಳಂತೆ ನಿರ್ದಿಷ್ಟ ಪ್ರದೇಶವನ್ನು ಹೊರತುಪಡಿಸಿ ಗಣಿಗಾರಿಕೆಗೆ ಅನುಮತಿ ನೀಡಲಾಗುತ್ತದೆ. |
| ಆ) | ಗಣಿಗಾರಿಕೆಗೆ ಸಂಬಂಧಿಸಿದ ಕಾರ್ಯಾಚರಣೆಗಳಿಂದ ಹಾಗೂ ತತ್ಸಂಬಂಧೀ ಪರಿಸರಾತ್ಮಕ ಪರಿಣಾಮಗಳಿಂದ ಬಾಧಿತರಾಗುವ ಜನರು ಮತ್ತು ವನ್ಯಜೀವಿಗಳ ಸುರಕ್ಷತೆ ಹಾಗೂ ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ: | ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮ-2016 ರ ನಿಯಮ 18ರಂತೆ, ಡಿ.ಎಂ.ಎಫ್ ರಡಿ ಸಂಗ್ರಹವಾದ ಒಟ್ಟು ನಿಧಿಯಲ್ಲಿ ಶೇಕಡ 10 ರಷ್ಟು ಮೊತ್ತವನ್ನು ದತ್ತಿನಿಧಿಗೆ (ಎಂಡೊಮೆಂಟ್ ಉದ್ದೇಶಗಳಿಗಾಗಿ), ಶೇಕಡ 5 ರಷ್ಟು ಮೊತ್ತವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿರಿಸಿದ ನಂತರ ಉಳಿದ 85% ನಿಧಿಯನ್ನು ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ ಮತ್ತು ಗಣಿಬಾಧಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಕಲ್ಯಾಣ ಯೋಜನೆಗಳಿಗಾಗಿ ಈ ಕೆಳಕಂಡಂತೆ ವಿನಿಯೋಗಿಸಲಾಗುತ್ತಿದೆ.<br><br>ಮೇಲ್ಕಂಡಂತೆ ಹಂಚಿಕೆಯಾದ ಮೊತ್ತದಲ್ಲಿ ಗಣಿಬಾಧಿತ ಪ್ರದೇಶದಲ್ಲಿನ ಹೆಚ್ಚಿನ ಆದ್ಯತಾ ವಲಯಗಳಿಗೆ ಕನಿಷ್ಠ 60% ಮತ್ತು ಇತರೆ ಆದ್ಯತೆಯ ವಲಯಗಳಿಗೆ ಗರಿಷ್ಠ 40% ಮೀರದಂತೆ ನಿಧಿಯನ್ನು ವಿನಿಯೋಗಿಸಲಾಗುತ್ತಿದೆ. ವಲಯಗಳ ವಿವರಗಳು ಈ ಕೆಳಗಿನಂತಿವೆ.<br><br><u>ಹೆಚ್ಚಿನ ಆದ್ಯತಾ ವಲಯಗಳು (60%)</u><br>1) ಕುಡಿಯುವ ನೀರು ಸರಬರಾಜು<br>2) ಪರಿಸರ ಸಂರಕ್ಷಣೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮ<br>3) ಆರೋಗ್ಯ ರಕ್ಷಣೆ<br>4) ಶಿಕ್ಷಣ<br>5) ಮಹಿಳಾ ಮತ್ತು ಮಕ್ಕಳ ಕಲ್ಯಾಣ<br>6) ವೃದ್ಧರು ಮತ್ತು ವಿಶೇಷಚೇತನರ ಕಲ್ಯಾಣ<br>7) ಕೌಶಲ್ಯಾಭಿವೃದ್ಧಿ.<br>8) ನೈರ್ಮಲ್ಯ<br>ಇತರೆ ಆದ್ಯತಾ ವಲಯಗಳ (40%)<br>1) ಮೂಲಭೂತ ಸೌಕರ್ಯ<br>2) ನೀರಾವರಿ<br>3) ಇಂಧನ (ಶಕ್ತಿ) ಮತ್ತು ಜಲಾನಯನ ಅಭಿವೃದ್ಧಿ<br>4) ಗಣಿ ಪರಿಸರದಲ್ಲಿನ ಪರಿಸರ ಸಂರಕ್ಷಣೆಗಾಗಿ/ ಸಂವರ್ಧನೆಗಾಗಿ ಇತರೆ ಯೋಜನೆ ವಲಯಗಳ ಕಾರ್ಯಗಳಿಗೆ ವಿನಿಯೋಗಿಸಬಹುದಾಗಿರುತ್ತದೆ. |

| | | |
|---|---|---|
| | | ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016ರನ್ವಯ ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಆಡಳಿತ ಮಂಡಳಿ( ಗೌರ್ನಿಂಗ್ ಕೌನ್ಸಿಲ್) ಯಲ್ಲಿ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿನ ಮಾನ್ಯ ಸಂಸದರು, ರಾಜ್ಯ ಸಭಾ ಸದಸ್ಯರು, ಶಾಸಕರು, ವಿಧಾನಪರಿಷತ್ತು ಸದಸ್ಯರುಗಳು ಸಹ ಸದಸ್ಯರು/ಟ್ರಸ್ಟಿಗಳಾಗಿರುತ್ತಾರೆ. ಸದರಿ ಸದಸ್ಯರು/ಟ್ರಸ್ಟಿಗಳು ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸದಸ್ಯ ಅನುಷ್ಠಾನ ಇಲಾಖೆಗಳಿಂದ ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ ಮತ್ತು ಗಣಿಬಾಧಿತ ಪ್ರದೇಶಗಳಲ್ಲಿ ವಾಸಿಸುವ ಜನರ ಕಲ್ಯಾಣಕ್ಕೆ ಅಗತ್ಯವಾದ ಯೋಜನೆಗಳ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಅನುಮೋದನೆಗೊಂಡ ನಂತರ ಯೋಜನೆಗಳನ್ನು ಕಾರ್ಯನುಷ್ಠಾನ ಗೊಳಿಸಲಾಗುತ್ತಿದೆ.<br><br>ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು W.P No.562/2009 ರಲ್ಲಿ ಆದೇಶಿಸಿದಂತೆ ಕಂಪನಿ ಕಾಯ್ದೆ 2013 ರ ಸೆಕ್ಷನ್ 8 ರಡಿ ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶ ಅಭಿವೃದ್ಧಿಗಾಗಿ "Karnataka Mining Environment Restoration Corporation" (KMERC) ಸ್ಥಾಪಿಸಲಾಗಿದೆ.<br><br>KMERC ವತಿಯಿಂದ ಗಣಿಭಾದಿತ ಪ್ರದೇಶಗಳಲ್ಲಿ ಪುನರ್ ವಸತಿ ಹಾಗೂ ಪುನಃಶ್ಚೇತನ ಕ್ರಿಯಾ ಯೋಜನೆ ರೂಪಿಸಿ ಸಲ್ಲಿಸಿದ ಯೋಜನೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:21.04.2022 ರಂದು ತಾತ್ವಿಕ ಅನುಮೋದನೆ ನೀಡಿರುತ್ತದೆ. ಸದರಿ ಯೋಜನೆಯ ಅನುಷ್ಠಾನದ ಮೇಲುಸ್ತುವಾರಿಗಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು Oversight Authority ಯಾಗಿ ನೇಮಿಸಿರುತ್ತದೆ. |
| ಇ) | ಎಲ್ಲಾ ಗಣಿಗಾರಿಕೆ ಚಟುವಟಿಕೆಗಳಲ್ಲಿ ಪರಿಸರಾತ್ಮಕ ಮಾರ್ಗಸೂಚಿಗಳನ್ನು ಮತ್ತು ನಿರ್ಬಂಧಗಳನ್ನು ವಿಶೇಷವಾಗಿ ಸ್ಫೋಟದ ಕಂಪನಗಳು ಹಾಗೂ ಮಾಲಿನ್ಯದಿಂದ ಬಾಧಿತಗೊಂಡಿರುವ ಸಂರಕ್ಷಿತ ಪ್ರದೇಶಗಳು, ವನ್ಯ ಜೀವಿ ಮೀಸಲು ಪ್ರದೇಶಗಳು ಮತ್ತು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನುಸರಿಸಲಾಗುತ್ತಿದೆಯೇ ? | ಗಣಿಗುತ್ತಿಗೆ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಸಂಬಂಧಸಿದಂತೆ ಅರಣ್ಯ ಇಲಾಖೆ, Indian Bureau of Mines, Directorate General of Mines Safety, ಜಿಲ್ಲಾಡಳಿತ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ವಿಧಿಸಿದ ಮಾನದಂಡ/ಮಾರ್ಗಸೂಚಿಗಳನ್ನು ಅನುಸರಿಸಿದಲ್ಲಿ ಮಾತ್ರ ಗಣಿಗಾರಿಕೆಗೆ ಅವಕಾಶ ನೀಡಲಾಗುವುದು.<br><br>ಸಂಬಂಧಪಟ್ಟ ಪ್ರಾಧಿಕಾರದ ನಿಯಮಗಳ ಉಲ್ಲಂಘನೆ ಬಗ್ಗೆ ವರದಿ ಮಾಡಿದಲ್ಲಿ ನಿಯಮಾನುಸಾರ ಗಣಿಗಾರಿಕೆಯನ್ನು ನಿರ್ಬಂಧಿಸಿ/ ದಂಡ/ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.<br><br>ಗಣಿಗುತ್ತಿಗೆ ಪ್ರದೇಶಗಳಲ್ಲಿನ ಸ್ಫೋಟಕ ಬಳಕೆಗೆ ಸಂಬಂಧಿಸಿದಂತೆ ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಸಿದಲ್ಲಿ Directorate General of Mines Safety ಮತ್ತು ಜಿಲ್ಲಾಡಳಿತದಿಂದ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. |

ಸಂಖ್ಯೆ: ಸಿಐ 202 ಎಂಎಂಎಂ 2025

(ಎಸ್.ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು